10.	ಹಾಸನ	9	20	21	18	160	423
11.	ದಕ್ಷಿಣ ಕನ್ನಡ	39	33	26	20	263	125
12.	ಕೊಡಗು	6	-	12	5	103	84
13.	ಬೆಳಗಾಂ	50	46	39	31	155	115
14.	ಧಾರವಾಡ	32	32	34	39	18	127
15.	ಉತ್ತರ ಕನ್ನಡ	18	17	22	19	84	92
16.	ಬಿಜಾಪುರ	15	30	23	47	107	138
17.	ಗುಲ್ಬರ್ಗ	18	14	19	23	163	241
18.	ಬೀದರ್	13	4	36	25	129	125
19.	ರಾಯಚೂರು	27	20	33	29	134	153
20.	ಬಳ್ಳಾರಿ	8	13	17	18	126	176
	ಒಟ್ಟು	**374**	**383**	**639**	**733**	**3190**	**3382**

ಗೋಕಾಕ್ ತಾಲ್ಲೂಕಿನಲ್ಲಿರುವ ಲೋಕಪಯೋಗಿ ಇಲಾಖೆಯ ರಸ್ತೆಗಳ ದುರಸ್ಥಿ.

2136 - ಶ್ರೀ ಚಂದ್ರಶೇಖರ ನಾಯಕ (ಗೋಕಾಕ್) :ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಉದ್ದಳತೆ ಎಷ್ಟು? ಅವುಗಳಲ್ಲಿ ರಾಜ್ಯ ಹೆದ್ದಾರಿ ಉದ್ದಳತೆ ಜಿಲ್ಲೆಯ ಮುಖ್ಯ ರಸ್ತೆಗಳ ಉದ್ದಳತೆ ಮತ್ತು ಇತರ ಜಿಲ್ಲಾ ರಸ್ತೆಗಳ ಉದ್ದಳತೆ ಎಷ್ಟು?

ಆ) 1995-96 ರಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಆಗಲ ಹೆಚ್ಚಿಸಲು ಮತ್ತು ದುರಸ್ತಿ ಕುರಿತು ಮಂಜೂರಾದ ಹಣವೆಷ್ಟು?

ಇ) ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಈ ವರ್ಷ ಖರ್ಚಾದ ಹಣವೆಷ್ಟು? ಯಾವ ಯಾವ ರಸ್ತೆಗಳಿಗೆ ಎಷ್ಟೆಷ್ಟು (ವಿವರ ಕೊಡುವುದು)

ಈ) 1995-96 ರಲ್ಲಿ ಜಿಲ್ಲಾ ಪಂಚಾಯ್ತಿಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡುವ ರಸ್ತೆಗಳು ಯಾವುವು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಗೋಕಾಕ್ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು ರಸ್ತೆ ಉದ್ದ 364.09 ಕಿ.ಮೀ.

1)	ರಾಜ್ಯ ಹೆದ್ದಾರಿ ಉದ್ದ	48.69 ಕಿಮೀ
2)	ಜಿಲ್ಲಾ ಮುಖ್ಯ ರಸ್ತೆ ಉದ್ದ	292.10 ಕಿಮೀ
3)	ಇತರೇ ಜಿಲ್ಲಾ ರಸ್ತೆ ಉದ್ದ	23.30 ಕಿಮೀ
	ಒಟ್ಟು	**364.09 ಕಿಮೀ**

ಆ) ಗೋಕಾಕ್ ತಾಲ್ಲೂಕಿನ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಹಾಗೂ ದುರಸ್ಥಿಗಾ 1995-96ರಲ್ಲಿ ರೂ. 22.58 ಲಕ್ಷಗಳ ಅನುದಾನ ಒದಗಿಸಲಾಗಿದೆ.

ಇ) 1995-96ರಲ್ಲಿ ದುರಸ್ತಿಗಾಗಿ ಜುಲೈ 95 ರವರೆಗೆ 2.41 ಲಕ್ಷ ರೂ. ಖರ್ಚಾಗಿರುತ್ತವೆ. ರಸ್ತೆವಾರು ವಿವರಗಳು ಈ ಕೆಳಗಿನಂತೆರುತ್ತವೆ.

	ರಸ್ತೆ ಹೆಸರು	*ಮಾಡಲಾದ ವೆಚ್ಚ ಲಕ್ಷ ರೂ.ಗಳಲ್ಲಿ*
ರಾಜ್ಯ ಹೆದ್ದಾರಿ		
	ಜತೆ ಜಾಂಬೋಟಿ ರಸ್ತೆ ಕಿಮೀ 76.315 ರಿಂದ 125ರವರೆಗೆ	1.78
ಜಿಲ್ಲಾ ಮುಖ್ಯ ರಸ್ತಗಳು		
1.	ಮಮದಾಪೂರ ಕ್ರಾಸದಿಂದ ಕೊಳವಿ ಕ್ರಾಸವರೆಗೆ ರಸ್ತೆ. ದುರಸ್ತಿ	0.02
2.	ಗೋಕಾಕ್ ಕೌಜಲಗಿ ರಸ್ತೆ.	0.04
3.	ತಿಡಿ ಸುಣಧೋಳಿ ಭೈರನಟ್ಟಿ ಹುಣಶ್ಯಾಳ ರಸ್ತೆ	0.05
4.	ಕೂಲಿಕಟ್ಟಿ ಶಿಲ್ತಿ ಭಾವಿ ರಸ್ತೆ	0.005
5.	ಗೋಕಾಕ ರೇಲ್ವೆ ಸ್ಟೇಶನದಿಂದ ಗೋಕಾಕ ರಸ್ತೆ	0.12
6.	ಅಕ ತಂಗೇರಹಾಳ ಕೊಳವಿ ರಸ್ತೆ	0.16
7.	ಬೆಳಗಾಂವ ಬೂದಿಹಾಳ ಅಂಗಲಗಿ ರಸ್ತೆ	0.04
8.	ಅಂಬಾವಿ ಲೋಕಾಪೂರ ರಸ್ತೆ	0.0005
9.	ಮಮದಾಪೂರ ಕೌಜಲಗಿ ಕುಲಗೋಡ ರಸ್ತೆ	0.19
	ಒಟ್ಟು	**2.41**

ಈ) ಯಾವುದು ಇರುವುದಿಲ್ಲ.